ತಾವೂ ಅಮ್ಮನಿಗೆ ಎದುರುತ್ತರ ಕೊಡುವಷ್ಟು ಸಲೀಸಾದ ನಡವಳಿಕೆ ರೂಢಿಸಿಕೊಂಡುಬಿಟ್ಟಿದ್ದಾರೆ. ತನಗೆ ಮಾತ್ರಾ ಯಾಕೆ ಹಿಂಜರಿಕೆ? ಅಮ್ಮ ತನ್ನನ್ನು ಹೆತ್ತ ಅಮ್ಮ ಎಂದು ಎಷ್ಟೇ ಮನವರಿಕೆ ಮಾಡಿಕೊಳ್ಳಲೆತ್ನಿಸಿದರೂ ಅದು ಅಸಾಧ್ಯವಾಗುವುದು ಯಾಕೆ? ಅಜ್ಜಿ ಆಪ್ತಳೆನಿಸುವಷ್ಟು ಅಮ್ಮನೇಕೆ ಅನಿಸುವುದಿಲ್ಲ? ಅಪ್ಪ ಕೂಡಾ ಹತ್ತಿರದಲ್ಲಿ ಕೂರಿಸಿಕೊಂಡು ವಾತ್ಸಲ್ಯದ ಎರಡು ಮಾತಾಡದೆ ಮುಗುಮ್ಮಾಗಿ ವ್ಯವಹರಿಸುವುದರ ಒಳಮರ್ಮವೇನು? ಕಣ್ಣಿಂದ ದೂರವಾಗಿದ್ದವಳು ಮನಸ್ಸಿನಿಂದಲೂ ದೂರವಾಗಿ ಬೇಡದ ಹೊರೆ ಎನಿಸುತ್ತಾಳೆಯೇ? ಕುಟುಂಬ ಅಂದರೆ ಎಲ್ಲರೂ ಒಟ್ಟಿಗಿದ್ದು ಕಷ್ಟಸುಖಗಳಲ್ಲಿ ಒಡನಾಡಿಕೊಂಡಿದ್ದರೆ ಮಾತ್ರಾ ಅಲ್ಲಿ ನಂಟು ಬೆಸೆಯುತ್ತದೆಯೇ? ಹಾಗಿದ್ದರೆ ಸೋದರಮಾವನ ಮನೆಯಲ್ಲಿ ಯಾಕೆ ಬೆಸೆಯಲಿಲ್ಲ ನಂಟು? ಅತ್ತೆಗೇಕೆ ತಾನೆಂದರೆ ಕಣ್ಣಕಿಸುರು? ಕದ್ದುಮುಚ್ಚಿ ಅವಳ ಮಕ್ಕಳಿಗೆ ಹಾಲು, ತುಪ್ಪ ತಿನ್ನಿಸುವ ಅವಳ ವ್ಯವಹಾರ ನಳಿನಿಗೆ ಮಾತ್ರವಲ್ಲ, ಅಜ್ಜಿಗೂ ಗೊತ್ತಿದೆ. ಆದರೂ ಅಜ್ಜಿ ಈ ಕುರಿತು ಬಾಯಿ ಬಿಡುವುದಿಲ್ಲ ಅಂದರೆ ಅವಳಿಗೂ ತಾನು ಬೇಡವಾಗಿದ್ದೇನೆ ಎಂದೇ ಅರ್ಥವಲ್ಲವೇ? ಅಲ್ಲೂ ಸಲ್ಲದ, ಇಲ್ಲೂ ಸಲ್ಲದ ತ್ರಿಶಂಕುವಾಗಿದ್ದೇನೆಯೇ ತಾನು? 'ನನ್ನ ಕಂಡರೆ ಯಾರಿಗೂ ಇಷ್ಟ ಇಲ್ಲ' ಎನ್ನುವ ಭಾವನೆ ನಳಿನಿಯಲ್ಲಿ ಬಲವಾಗಿ ಬೇರೂರಿಬಿಟ್ಟಿತ್ತು. ಪ್ರೀತಿಯ ಒಂದು ಮಾತಿಗಾಗಿ ಇಡೀ ಜೀವ ಹಪಹಪಿಸುತ್ತಿತ್ತು. ಅವಳ ಓದು ಕೈದಾಗಿದ್ದೇ ಆಗಿದ್ದು, ಮನೆಗೆಲಸದ ಹೊರೆ ಅವಳ ಮೇಲೆ ಮಗುಚಿಕೊಂಡು ಬಿತ್ತು. 'ಕೆಲಸ ಕಲಿತರೆ ಕೈಂಯಾಗಲ್ಲ. ಕೆಲಸ ಮಾಡಿ ಯಾರೂ ಹಾಳಾದೋರಿಲ್ಲ' ಅಜ್ಜಿಯ ಕುಮ್ಮಕ್ಕು ತನಗೋ, ಅತ್ತೆಗೋ? ಗೊತ್ತಾಗುತ್ತಿರಲಿಲ್ಲ ನಳಿನಿಗೆ. ಅತ್ತೆ ಜರಿಸೀರೆ ಉಟ್ಟು, ಸೆರಗು ಬೀಸಿಕೊಂಡು, ಎಲ್ಲಿ ಊಟದಮನೆಯ ಹೇಳಿಕೆ ಬಂದರೂ ಮಾವನ ಜೊತೆ ಎದ್ದುಬಿಡುತ್ತಿದ್ದಳು. ನಳಿನಿಯನ್ನು ಅಪ್ಪನ ಮನೆಗೆ ಹೊತ್ತು ಹಾಕುವ ಮಾತು ಅವಳ ಬಾಯಿಂದ ಬರುವುದು ಕಮ್ಮಿಯಾಗಿತ್ತು. ಸೊಂಟಮುರೀ ಗೆಯ್ಯಲು ಪುಗಸಟ್ಟೆ ಆಳೊಂದು ಸಿಕ್ಕಿದರೆ ಯಾರಿಗೆ ಬೇಡ? ಅದೂ ಹಳ್ಳಿಮನೆ ಕೆಲಸಕ್ಕೆ? ಮೈ ತೊಳೆಯಲು ಹೋದರೆ ಉಟ್ಟ ಸೀರೆ ಬಿಚ್ಚಿ ಹಾಗೆ ಹಾಗೇ ಬಿಟ್ಟು ಬರುವ ಅತ್ತೆ ಆಲಸ್ಯ ರೂಢಿಸಿಕೊಂಡು ಬಿಟ್ಟಿದ್ದಳು. ಎಂತೆಂತಾ ಅಗ್ನಿದಿವ್ಯಗಳನ್ನು ಎದುರಿಸಿದ್ದಾಳೆ ಈ ನಳಿನಿ. ನೆನೆಸಿಕೊಂಡರೆ ಈಗಲೂ ಅವಳಿಗೆ ಕಂಠ ಬಿಗಿಯುತ್ತದೆ. ಸೋದರಮಾವನ ಮಕ್ಕಳ ಒಳ ಉಡುಪುಗಳ ಸಮೇತ ಬಟ್ಟೆ ಒಗೆಯುದರಿಂದ ತೊಡಗಿ... ತೊಡಗಿ... ತನ್ನ ಮುಟ್ಟಿನ ಬಟ್ಟೆಗಳನ್ನು ಒಗೆಸುವುದಕ್ಕೂ ಹಿಂಜರಿದವಳಲ್ಲ ಅತ್ತೆ. ಅಸಲಿಗೆ ಈ ನಿರ್ಭಾಗ್ಯ ಹುಡುಗಿ ಮನುಷ್ಯರ ಜಾತಿಗೆ ಸೇರಿದವಳೆಂದು ಅವಳು ಅಂದುಕೊಂಡಿರಲಿಕ್ಕೇ ಇಲ್ಲ. ಏನಾದರೊಂದು ನೆಪ ಮಾಡಿಕೊಂಡು ಅತ್ತೆ ಬಾಯಿ ಮಾಡಿದರೆ ಅದಕ್ಕೆ ದನಿಗೂಡಿಸಲು ಅಜ್ಜಿ ತಯಾರು. ಹೀಗಿದ್ದರೂ ರಾತ್ರಿ ಯಾವುದೋ ಹೊತ್ತಿನಲ್ಲಿ ತನ್ನ ಮೈಮೇಲಿಂದ ಜಾರಿದ ಹೊದಿಕೆಯನ್ನು ಸರಿಪಡಿಸಿ ಹೊಚ್ಚುವ ಕೈಗಳು, ತಲೆಗೆ ಎರೆದುಕೊಂಡ ದಿನ ನೀಳಗೂದಲಿನ ಸಿಕ್ಕು ಬಿಡಿಸಲು ಪರದಾಡುವಾಗ 'ಬಾ ಇಲ್ಲಿ, ಪ್ರಾರಬ್ಧ...' ಎನ್ನುವ ಸಿಡುಕಿನಿಂದಲೇ ಸಿಕ್ಕು ಬಿಡಿಸಲು ಸಹಕರಿಸುತ್ತಿದ್ದವಳು, ಅಷ್ಟರಮಟ್ಟಿಗಿನ ಅಭಿವ್ಯಕ್ತಿಯಿಂದಲೇ ಅಜ್ಜಿಯ ಕುರಿತಾಗಿ ನಳಿನಿಯ ಅಂತರಂಗದಲ್ಲಿ ಮಾತುಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಾಗದಂತಾ ಕೃತಜ್ಞತೆಯ ಎಳೆಯೊಂದು ಸಣ್ಣಗೆ ಹರಿದಾಡುತ್ತಿತ್ತು. ಮೈಯಲ್ಲಿ ಭೂತ ಹೊಕ್ಕವಳಂತೆ ಮನೆಗೆಲಸ ಮಾಡುತ್ತಿದ್ದಳು ನಳಿನಿ. ಕೆಲಸ ಮಾಡುವುದೇ ತನ್ನ ಅವ್ಯಕ್ತ ವೇದನೆಗಳಿಗೆ ಹೊರಹರಿವಿನ ದಾರಿ ಎನ್ನುವಂತೆ ಕತ್ತೆಯ ಹಾಗೆ ಗೆಯ್ಯುತ್ತಿದ್ದಳು. ಮನೆಯವರಿಂದ ಬರದ ಕನಿಕರದ ಮಾತು ಬೇರೆ ಯಾರಿಂದ ಕೇಳಿದರೂ ಕಣ್ಣು ತುಂಬಿಕೊಳ್ಳುವಷ್ಟು ದುರ್ಬಲಮನಸ್ಕಳಾಗಿಬಿಟ್ಟಿದ್ದಳು. ಹೀಗಿರುವಾಗ, ಇದು ಸದಾಕಾಲವೂ ಹೀಗೆಯೇ ಇರುತ್ತದೆಯೇನೋ ಅಂದುಕೊಂಡಿದ್ದಾಗ, ಅವಳ ಅಪ್ಪನೆನಿಸಿಕೊಂಡವನಿಗೆ ಅದ್ಯಾವ ದೇವರು ಸದ್ಬುದ್ಧಿ ಕೊಟ್ಟನೋ ಕೊಟ್ಟವನಿಗೇ ಗೊತ್ತು. ನಳಿನಿಗೊಂದು ಸಂಬಂಧದ ಪ್ರಸ್ತಾಪ